**ಪಾಠ-8** **ಫೆಬ್ರವರಿ 13-19**

# ನನ್ನ ಜನರನ್ನು ಸಂತೈಸಿರಿ



**ಸಬ್ಬತ್ತಿನ ಮಧ್ಯಾಹ್ನ : ಈ ವಾರದ ಪಾಠದ ಅಧ್ಯಯನಕ್ಕಾಗಿ ಓದಿರಿ :** ಯೆಶಾಯ 40:1,2; ಯೆಶಾಯ 40:3-8; ಯೆಶಾಯ 40:9-11; ಯೆಶಾಯ 40:12-31.

**ಸ್ಮರಣವಾಕ್ಯ : "ಶುಭ ಸಮಾಚಾರವನ್ನು ತಿಳಿಸಬಲ್ಲ ಚೀಯೋನೇ, ಉನ್ನತ ಪರ್ವತವನ್ನು ಹತ್ತಿಕೋ; ಸುವರ್ತಮಾನವನ್ನು ಪ್ರಕಟಿಸಬಲ್ಲ ಯೆರೂಸಲೇಮೇ, ನಿನ್ನ ಧ್ವನಿಯನ್ನು ಗಟ್ಟಿಯಾಗಿ ಎತ್ತು, ನಿರ್ಭಯವಾಗಿ ಎತ್ತಿ, ಯೆಹೂದದ ಪಟ್ಟಣಗಳಿಗೆ- ಇಗೋ, ನಿಮ್ಮ ದೇವರು! .... ಎಂದುಸಾರು"** (ಯೆಶಾಯ 40:9).

ಪ್ರಪಂಚದ ಎರಡನೇ ಮಹಾಯುದ್ಧ ಕ್ರಿ.ಶ.1945ರಲ್ಲಿ ಮುಗಿದಾಗ ಜಪಾನಿನ ಸೈನಿಕ ಶೋಯಕೀ ಯೋಕಿ ಎಂಬಾತನು "ಗ್ವಾಮ್ ದ್ವೀಪ"ದ ಅರಣ್ಯದಲ್ಲಿ ಅಡಗಿಕೊಂಡಿದ್ದನು. ಅಮೇರಿಕ ಸಂಯುಕ್ತ ಸಂಸ್ಥಾನದ ವಿಮಾನಗಳು ಶಾಂತಿಯನ್ನು ಘೋಷಿಸುವ ಕರಪತ್ರಗಳನ್ನು ಮೇಲಿನಿಂದ ಹಾಕುತ್ತಿದ್ದರು. ಆದರೆ ಯೋಕಿಯ ಇದನ್ನು ಶತ್ರುಗಳ ತಂತ್ರವೆಂದು ಬಗೆದನು. ಜಪಾನಿನ ಚಕ್ರವರ್ತಿಯ ನಿಷ್ಠೆಯ ದೇಶಪ್ರೇಮಿಯಾದ ಈ ಸೈನಿಕನು ಶರಣಾಗಬಾರದೆಂದು ಪ್ರತಿಜ್ಞೆ ಮಾಡಿದ್ದನು. ಹೊರ ಪ್ರಪಂಚದ ಸಂಪರ್ಕವಿಲ್ಲದೆ ಅರಣ್ಯದಲ್ಲಿ ಸಿಕ್ಕುವ ಗೆಡ್ಡೆಗೆಣಸು ತಿಂದು ಕಷ್ಟಕರವಾದ ಜೀವನ ನಡೆಸುತ್ತಿದ್ದನು. ಎರಡನೇ ಮಹಾಯುದ್ಧವು

* ಈ ವಾರದ ಪಾಠವನ್ನು ಫೆಬ್ರವರಿ 20ರ ಸಬ್ಬತ್ತಿಗೆ ಅಧ್ಯಯನ ಮಾಡಿ ಸಿದ್ಧಪಡಿಸಿಕೊಳ್ಳಿರಿ.

ನಡೆದು 27 ವರ್ಷಗಳು ಕಳೆದ ಮೇಲೆ ಕ್ರಿ.ಶ.1972ರಲ್ಲಿ ಬೇಟೆಗಾರರು ಯೋಕಿಯನ್ನು ಭೇಟಿ ಮಾಡಿದಾಗ ಶಾಂತಿ ಸಂದೇಶವು ನಿಜವಾದದೆಂದು ತಿಳಿಯಿತು. ಉಳಿದವರೆಲ್ಲರೂ ಅಷ್ಟು ವರ್ಷಗಳು ಸುಖಶಾಂತಿಯನ್ನು ಅನುಭವಿಸುವಾಗ ಯೋಕಿಯು ಏಕಾಂಗಿಯಾಗಿ ಮಾನಸಿಕ ಒತ್ತಡದಲ್ಲಿ ಬದುಕು ಸಾಗಿಸಿದ್ದನು" – ರಾಯ್‌ಗಣಿಯವರ ಆಲ್ಬರ್ ಕಾಲ್‌ನ 304ನೇ ಪುಟ.

ಬಹಳ ಶತಮಾನಗಳ ಹಿಂದೆ ಯೆಶಾಯನ ಮುಖಾಂತರ ಜನರ ಕಷ್ಟಸಂಕಟಗಳ ಕಾಲಗಳು ಮುಗಿದವು ಎಂಬುದಾಗಿ ದೇವರು ಅವರಿಗೆ ಪ್ರಕಟಿಸುತ್ತಾನೆ: ನನ್ನ ಜನರನ್ನು ಸಂತೈಸಿರಿ, ಸಂತೈಸಿರಿ; ಯೆರೂಸಲೇಮಿನ ಸಂಗಡ ಹೃದಯಂಗಮವಾಗಿ ಮಾತಾಡಿರಿ; ಅದಕ್ಕೆ ಗಡುತೀರಿತು, ವಿಧಿಸಿದ ದೋಷ ಫಲವೆಲ್ಲಾ ನೆರವೇರಿತು, ಅದರ ಎಲ್ಲಾ ಪಾಪಗಳಿಗೂ ಯೆಹೋವನ ಕೈಯಿಂದ ಎರಡರಷ್ಟು ಶಿಕ್ಷೆಯಾಯಿತು ಎಂದು ಆ ನಗರಿಗೆ ಕೂಗಿ ಹೇಳಿರಿ; ಇದೇ ನಿಮ್ಮ ದೇವರ ಆಜ್ಞೆ" (ಯೆಶಾಯ 40:1,2).

ಮೇಲೆ ಹೇಳಿರುವ ವಚನಗಳು ಅರ್ಥವೇನು ಎಂಬುದನ್ನು ಕಲಿಯೋಣ.

**ಭಾನುವಾರ** **ಫೆಬ್ರವರಿ 14**

## ಮುಂದಿನ ಕಾಲಕ್ಕಿರುವ ಸಾಂತ್ವನ

ಯೆಶಾಯ 40:1,2 ವಚನಗಳಲ್ಲಿ ದೇವರು ತನ್ನ ಜನರನ್ನು ಸಂತೈಸುತ್ತಾನೆ. ಅವರ ಶಿಕ್ಷೆಯ ಕಾಲವು ಅಂತಿಮವಾಗಿ ಮುಗಿಯಿತು, ಅವರಿಗಾದ ಶಿಕ್ಷೆ ಯಾವುದು?

ಈ ಪ್ರಶ್ನೆಗೆ ಅನೇಕ ಉತ್ತರಗಳನ್ನು ಕೊಡಬಹುದು. ಅಶ್ಶೂರರ ವಿಧಿಸಿದ ಶಿಕ್ಷೆ, ಅಶ್ಶೂರವನ್ನು ದೇವರು ನನ್ನ ಕೋಪವೆಂಬಕೋಲು ಎಂದು ಹೇಳುತ್ತಾನೆ (ಯೆಶಾಯ 10). ದೇವರು ಸನ್ಹೇರೀಬನನ್ನು ಕ್ರಿ.ಪೂ.701ರಲ್ಲಿ ನಾಶಪಡಿಸಿ ಯಹೂದವನ್ನು ಅಶ್ಶೂರರ ಕೈಯಿಂದ ಬಿಡಿಸಿದನು (ಯೆಶಾಯ 37). ಬ್ಯಾಬಿಲೋನಿಯರು ವಿಧಿಸಿದ ಶಿಕ್ಷೆಯೂ ಸಹ ಇತ್ತು. ಅವರು ಜನರನ್ನೂ

ಮತ್ತು ಬೆಲೆ ಬಾಳುವ ವಸ್ತುಗಳನ್ನೂ ಹೊತ್ತುಕೊಂಡು ಹೋದರು. ಯಾಕೆಂದರೆ ಹಿಜ್ಕೀಯನು ಬ್ಯಾಬಿಲೋನಿನ ರಾಜ ಮೆರೋದಕಬಲದಾನ ಕಳುಹಿಸಿದ ರಾಯಭಾರಿಗಳಿಗೆ ತನ್ನ ರಾಜ್ಯದ ಎಲ್ಲಾ ಸಂಪತ್ತನ್ನು ತೋರಿಸಿದ್ದನು (ಯೆಶಾಯ 39). ಉಳಿದ ದೇಶಗಳಿಂದಲೂ ಅವರಿಗೆ ಶಿಕ್ಷೆಯು ಒದಗಿತ್ತು. ಅವುಗಳ ವಿರೋಧವಾಗಿ ಯೆಶಾಯನು ದೈವಸಂದೇಶವನ್ನು ನೀಡಿದ್ದಾನೆ (ಯೆಶಾಯ 14–23).

ಇಷ್ಟರಲ್ಲಿ, ಯೆಶಾಯ 7:17ನೇ ವಚನದಿಂದ 38:6ನೇ ವಚನದವರೆಗೆ ಅಶ್ಶೂರವು ಮತ್ತು ಅಶ್ಶೂರರು ಎಂಬ ಪದವು 43 ಸಲ ಉಲ್ಲೇಖವಾಗಿದೆ, ನಂತರದ ಅಧ್ಯಾಯಗಳಲ್ಲಿ ಈ ಪದವು ಕೇವಲ ಒಂದೇ ಸಲ ಉಲ್ಲೇಖವಾಗಿದೆ. ಮೊದಲು ಐಗುಪ್ತರು ನಂತರ ಅಶೂರ್ಯರು ತನ್ನ ಜನರನ್ನು ಬಾಧಿಸದರೆಂದು ದೇವರು ಹೇಳುವ ಮಾತು ಯೆಶಾಯ 52:4ರಲ್ಲಿದೆ. ಮುಂದಿನ ಭಾಗಗಳಲ್ಲಿ ಬ್ಯಾಬಿಲೋನಿನ ಸೆರೆಯಿಂದ ಆಗುವ ಬಿಡುಗಡೆಯ ಉಲ್ಲೇಖಗಳಿವೆ (ಯೆಶಾಯ 43:14, ಯೆಶಾಯ 47:1, ಯೆಶಾಯ 48:14,20). ಪಾರಸಿಯ ರಾಜನಾದ ಕೋರೆಷನು ಕ್ರಿ.ಪೂ.539ನೇ ವರ್ಷದಲ್ಲಿ ಬ್ಯಾಬಿಲೋನನ್ನು ಜಯಿಸಿ ಸೆರೆಯಾಳುಗಳಾಗಿದ್ದ ಯೆಹೂದ ಜನರನ್ನು ಬಿಡುಗಡೆಗೊಳಿಸಿದನು (ಯೆಶಾಯ 44:28, ಯೆಶಾಯ 45:1, ಯೆಶಾಯ 45:13).

ಯೆಶಾಯ 1 ರಿಂದ 39 ಅಧ್ಯಾಯಗಳು ಕ್ರಿ.ಪೂ.701 ಯೆಹೂದ ಜನರು ಬಿಡುಗಡೆಯಾದ ಕಾಲದವರೆಗೆ ನಡೆದ ಎಲ್ಲಾ ಘಟನೆಗಳಿಗೆ ಒತ್ತುಕೊಡುತ್ತವೆ. ಆದರೆ ಯೆಶಾಯನ 40ನೇ ಅಧ್ಯಾಯದ ಆರಂಭವು ಕೂಡಲೇ 150 ವರ್ಷಗಳು ಮುಂದಕ್ಕೆ ಜಿಗಿಯುತ್ತದೆ. ಕ್ರಿ.ಪೂ.539ರಲ್ಲಿ ಯೆಹೂದ್ಯರು ಬಿಡುಗಡೆ ಹೊಂದಿ ಶೀಘ್ರದಲ್ಲಿಯೇ ತಮ್ಮ ದೇಶಕ್ಕೆ ಹಿಂದಿರುಗುವುದಕ್ಕಿದ್ದರು.

ಬ್ಯಾಬಿಲೋನಿನಿಂದ ಹಿಂದಿರುಗಿ ಬರುವ ಪ್ರಸಂಗವು ಯೆಶಾಯನ ಕಾಲಕ್ಕಿಂತ ಮುಂಚೆ ನಡೆದ ಯಾವುದಾದರೂ ಘಟನೆಗೆ ಸಂಬಂಧಪಡುತ್ತದೆಯೇ? ಹಾಗಿದ್ದರೆ ಅದು ಯಾವುದು?

ಯೆಶಾಯ 39ನೇ ಅಧ್ಯಾಯವು ಬ್ಯಾಬಿಲೋನು ಸೆರೆ ಒಯ್ಯುವುದನ್ನು

ಮುಂತಿಳಿಸಿದ ನಂತರದ ಅಧ್ಯಾಯಗಳಲ್ಲಿ ವಿಷಯ ಬದಲಾವಣೆಯಾಗುವುದನ್ನು ತೋರಿಸುತ್ತದೆ. ಹಿಜ್ಕೀಯನ ಬಳಿಕ ಸಿಂಹಾಸನವೇರಿದ ರಾಜರುಗಳಿಗೆ ಅನ್ವಯಿಸಬಹುದು (ಯೆಶಾಯ 39:6,7). ಇದರ ಜೊತೆಗೆ ಯೆಶಾಯ 13,14 ಮತ್ತು 21ನೇ ಅಧ್ಯಾಯಗಳಲ್ಲಿ ಬ್ಯಾಬಿಲೋನು ಅವನತಿಯನ್ನು ಹೊಂದಿ ದೇವಜನರು ಬಿಡುಗಡೆಯಾಗುವುದನ್ನು ಮುಂತಿಳಿಸುತ್ತವೆ. ಯೆಹೋವನು ಯಾಕೋಬ್ಯರನ್ನು ಕನಿಕರಿಸಿ ಮತ್ತೆ ಇಸ್ರಾಯೇಲ್ಯರನ್ನು ಆರಿಸಿಕೊಂಡು ಸ್ವದೇಶದಲ್ಲಿ ತಂಗಿಸಬೇಕೆಂದಿದ್ದಾನಷ್ಟೆ; ಪರದೇಶಿಗಳು ಅವರೊಂದಿಗೆ ಕೂಡಿಬಂದು ಯಾಕೋಬನ ಮನೆತನಕ್ಕೆ ಸೇರಿಸಿಕೊಳ್ಳುವರು. ಜನಾಂಗದವರು ಅವರನ್ನು ಕರತಂದು ಸ್ವಸ್ಥಳಕ್ಕೆ ಸೇರಿಸುವರು (ಯೆಶಾಯ 14:1–4). ಜನರು ಪಡುವ ಕಷ್ಟಸಂಕಟಗಳಿಗೆ ಅಂತ್ಯವಿದೆ ಎಂದು ದೇವರು ತನ್ನ ಜನರಿಗೆ ವಾಗ್ದಾನ ಮಾಡುತ್ತಾನೆ (ಯೆಶಾಯ 40:1,2) ಮತ್ತು (ಯೆಶಾಯ 14:1–4) ಈ ವಚನಗಳಲ್ಲಿರುವ ಹತ್ತಿರದ ಸಂಬಂಧವನ್ನು ಗಮನಿಸಿರಿ.

ಪ್ರಸ್ತುತ ನೀವು ಕಷ್ಟಸಂಕಟಗಳ ಮಧ್ಯದಲ್ಲಿ ಪಾಡುಪಾಡುತ್ತಿರುವಾಗ ಅವುಗಳು ಅಂತ್ಯಗೊಳ್ಳುವ ಸತ್ಯವೇದದ ವಾಗ್ದಾನಗಳು ನಿಮಗೆ ಈವಾಗ ಯಾವ ಅರ್ಥವನ್ನು ನೀಡುತ್ತವೆ? ಈ ವಾಗ್ದಾನಗಳು ಇಲ್ಲದ ಪಕ್ಷದಲ್ಲಿ ನಮ್ಮ ನಂಬಿಕೆಯು ನಮಗೆ ಎಷ್ಟು ಒಳ್ಳೆಯದಾಗಿರುತ್ತಿತ್ತು? ಆದಾಗ್ಯೂ ನಾವು ಇವುಗಳಿಗೆ ಅಂಟಿಕೊಳ್ಳುವುದು ಬಹಳ ಮುಖ್ಯ ಏಕೆ?

**ಸೋಮವಾರ** **ಫೆಬ್ರವರಿ 15**

## ಇರುವಿಕೆ, ವಾಕ್ಯ ಮತ್ತು ರಸ್ತೆಯ ಕೆಲಸ (ಯೆಶಾಯ 40:3–8)

ದೇವಜನರು ಸಾಂತ್ವನವನ್ನು ಹೇಗೆ ಪಡೆಯುತ್ತಾರೆ (ಯೆಶಾಯ 40:1–8). ದೇವರು ತನ್ನ ಮಹಿಮೆಯನ್ನು ಪ್ರಕಟಿಸಲು ಬರುತ್ತಿದ್ದಾನೆಂಬುದಾಗಿ ಒಬ್ಬ ಅನಾಮಿಕ ದೂತನು ಸಾರುತ್ತಿದ್ದಾನೆ (ಯೆಶಾಯ 40:3–5). ಮತ್ತೊಂದು ಧ್ವನಿಯು ನರಜಾತಿಯೆಲ್ಲಾ ಬಾಡಿಹೋಗುವ ಹುಲ್ಲಿನಂತಿದೆ. ಆದರೆ ನಮ್ಮ ದೇವರ ಮಾತೋ ಸದಾಕಾಲವೂ ಇರುವುದು ಎಂದು ಸಾರಿ ಹೇಳುತ್ತಿದೆ (ಯೆಶಾಯ 40:8).

ದೇವಜನರು ಗಡಿಪಾರಾದ ಮೇಲೆ ಸಿನಾಯಿಬೆಟ್ಟದಲ್ಲಿ ಏನು ಹೊಂದಿಕೊಂಡಿದ್ದರೋ ಅದನ್ನು ಹಿಂದಕ್ಕೆ ಪಡೆದುಕೊಂಡರು ಮತ್ತು ಭ್ರಷ್ಟರಾಗಿದ್ದ ಕಾಲದಲ್ಲಿ ಅವುಗಳನ್ನು ನಿರಾಕರಿಸಿದ್ದರು. ಆದ್ದರಿಂದ ಅವರು ಶಿಕ್ಷೆಗೆ ಒಳಗಾದರು. ದೇವರ ಪ್ರಸನ್ನತೆ ಮತ್ತು ವಾಕ್ಯವು ಇಸ್ರಾಯೇಲ್ಯರೊಂದಿಗೆ ದೇವರು ಮಾಡಿದ ಒಡಂಬಡಿಕೆಯ ಮೂಲಪರಿಕರಗಳಾಗಿದ್ದವು. ಆತನ ಪ್ರಸನ್ನತೆ ಮತ್ತು ವಾಕ್ಯವು ಅವರ ಮಧ್ಯೆ ದೇವದರ್ಶನಗುಡಾರದ ಪವಿತ್ರತೆಯಲ್ಲಿ ನೆಲೆಗೊಂಡಿದ್ದವು (ವಿ.ಕಾಂಡ 25:8,16). ದೇವರ ವಾಕ್ಯವನ್ನು ಉಲ್ಲಂಘಿಸಿ ನಡೆದುಕೊಂಡದ್ದರಿಂದ ದೇವರು ತನ್ನ ಪ್ರಸನ್ನತೆಯನ್ನು ಆಲಯದಿಂದ ತೆಗೆದುಬಿಟ್ಟನು (ಯೆಹೆಜ್ಕೇಲನು 9 ರಿಂದ 11 ಅಧ್ಯಾಯಗಳು), ಆದರೆ ಆತನು ಹಿಂದಿರುಗಿ ಬರುವವನಾಗಿದ್ದಾನೆ. ಆತನ ಪ್ರಸನ್ನತೆ (ಇರುವಿಕೆ) ಮತ್ತು ಆತನ ನಂಬಲರ್ಹವಾದ ಶಾಶ್ವತವಾಕ್ಯವು ಆದರಣೆ, ಬಿಡುಗಡೆ ಮತ್ತು ನಿರೀಕ್ಷೆಗಳನ್ನು ತರುತ್ತವೆ.

ದೇವರ ಬರುವಿಕೆಗಾಗಿ ಯಾವ ಸಿದ್ಧತೆಗಳು ಅವಶ್ಯಕವಾಗಿವೆ? (ಯೆಶಾಯ 40:3–5).

ರಾಜನಾದವನು ಉಬ್ಬುತಗ್ಗುಗಳಿರುವ ಮಾರ್ಗದಲ್ಲಿ ಕುಲುಕುವ ರಥದ ಮೇಲೆ ಪ್ರಯಾಣಿಸುವುದು ಅವನಿಗೆ ತರವಲ್ಲ. ಅವನು ಬರುವುದಕ್ಕೆ ಮುಂಚೆ ಮಾರ್ಗದಲ್ಲಿರುವ ಉಬ್ಬುತಗ್ಗುಗಳನ್ನು ಸಮಮಾಡಿ ದಾರಿಯನ್ನು ಸುಗಮ ಮಾಡಬೇಕು. ಗಡಿಪಾರಾದ ಜನರ ಮಧ್ಯೆ ಪವಿತ್ರಾಲಯದಂತಿರುವ ರಾಜಾಧಿರಾಜನು ಮೂಡಲಿನಿಂದ ಬರುತ್ತಾನೆಂದು ತೋರುವಾಗ ಇನ್ನೂ ಹೆಚ್ಚಿನ ಸಿದ್ಧತೆ ಮಾಡಬೇಕಾಗುತ್ತದೆ (ಯೆಹೆಜ್ಕೇಲ 11:16). ಭೂಪ್ರದೇಶದ ದೊಡ್ಡ ಏರ್ಪಾಡು ಮತ್ತೆ ಆಗಬೇಕಾಗುತ್ತದೆ. ಯೆರೂಸಲೇಮಿನ ಪೂರ್ವಭಾಗದಲ್ಲಿರುವ ಬೆಟ್ಟಗುಡ್ಡಗಳ ಪ್ರದೇಶದಲ್ಲಿ ಸಮತಟ್ಟಾದ ನುಣ್ಣನೆಯ ಹೆದ್ದಾರಿಯನ್ನು ನಿರ್ಮಿಸುವುದು ಸಿಡಿಮದ್ದು ಮತ್ತು ರಸ್ತೆನಿರ್ಮಾಣಯಂತ್ರಗಳಿಂದಲೂ ಆಗದ ಒಂದು ಎದೆಗುಂದಿಸುವ ಕೆಲಸವಾಗಿದೆ. ದೇವರಿಂದ ಮಾತ್ರ ಈ ಕೆಲಸವನ್ನು ಮಾಡಲು ಸಾಧ್ಯವಾಗುತ್ತದೆ. ಆತನು ಉಬ್ಬುತಗ್ಗುಗಳುಳ್ಳ ಸ್ಥಳಗಳನ್ನು ಸಮತಟ್ಟಾದ ನೆಲವನ್ನಾಗಿ ಮಾಡುತ್ತಾನೆ (ಯೆಶಾಯ 42:16). ಆದರೆ ಆತನಿಗೆ ನಿಜವಾಗಿ ಅಕ್ಷರಶಃ ನೆಲದ ಮೇಲಿನ ರಸ್ತೆಯ ಮೇಲೆ ಓಡಾಟ ಮಾಡುವವನಲ್ಲ. ಯಾಕೆಂದರೆ

ಆತನು ಗಾಳಿಯಲ್ಲಿ ಸಂಚರಿಸಬಲ್ಲ ಕೊರೂಬಿಯರು ನಡೆಸುವ ರಥದಲ್ಲಿ ಬರುತ್ತಾನೆ (ಯೆಹೆಜ್ಕೇಲನು 1:9–11). ಹೊಸ ಒಡಂಬಡಿಕೆಯು ಸ್ಪಷ್ಟವಾಗಿ ಯೆಶಾಯನ ಪ್ರವಾದನೆಯನ್ನು ಆಧ್ಯಾತ್ಮಿಕವಾದ ರಸ್ತೆಯ ಕೆಲಸವು ಸ್ನಾನಿಕನಾದ ಯೋಹಾನನ ಉಪದೇಶದಿಂದ ನೆರವೇರಿದುದಕ್ಕೆ ಅನ್ವಯ ಮಾಡುತ್ತದೆ (ಮತ್ತಾಯ 3:3). ಪರಲೋಕ ರಾಜ್ಯವು ಸಮೀಪವಾಯಿತು. ದೇವರ ಕಡೆಗೆ ತಿರುಗಿಕೊಳ್ಳಿರಿ ಎಂದು ಆತನು ಉಪದೇಶಿಸಿದನು (ಮತ್ತಾಯ 3:2). ನೀವು ಪಾಪ ಪರಿಹಾರಕ್ಕಾಗಿ ದೇವರ ಕಡೆಗೆ ತಿರುಗಿಕೊಂಡು ದೀಕ್ಷಾಸ್ನಾನ ಮಾಡಿಸಿಕೊಳ್ಳಬೇಕೆಂದು ಸಾರಿ ಹೇಳುತ್ತಿದ್ದನು (ಮಾರ್ಕ 1:4). ಆದುದರಿಂದ ದಾರಿ ಸಿದ್ಧಪಡಿಸುವುದು ಎಂದರೆ ಪಾಪದ ಜೀವಿತವನ್ನು ಬಿಟ್ಟು ಪಶ್ಚಾತ್ತಾಪಪಟ್ಟು ದೇವರ ಕಡೆಗೆ ತಿರುಗಿಕೊಳ್ಳುವುದೇ ಆಗಿದೆ. ಅದರಿಂದ ಪಾಪಿಯು ಕ್ಷಮಾಪಣೆಯನ್ನು ಹೊಂದುತ್ತಾನೆ. ದೇವರ ಪ್ರಸನ್ನತೆಯಲ್ಲಿ ಅವನಿಗೆ ಸಮಾಧಾನ ಸಿಗುತ್ತದೆ.

ಯೆರೆಮೀಯ 31:31–34 ವಚನಗಳೂ ಸಹಾ ಯೆಹೂದದ ಸೆರೆಯಾಳುಗಳಿಗೆ ಆಧ್ಯಾತ್ಮಿಕ ರೀತಿಯ ದಾರಿಸಿದ್ಧತೆಯ ಸಂದೇಶವನ್ನು ಬಹಳ ಸಲ ಸಾರಿ ಹೇಳುತ್ತವೆ. ಯಾರು ಹೊಸದಾಗಿ ಆರಂಭಿಸಲು ಇಚ್ಛಿಸುವರೋ ಅವರಿಗೆ ಕರ್ತನು "ಹೊಸ ಒಡಂಬಡಿಕೆ" ಮಾಡಿಕೊಳ್ಳುತ್ತಾನೆ ಮತ್ತು ಅವರ ಹೃದಯಗಳಲ್ಲಿ ತನ್ನ ಆಜ್ಞೆಯನ್ನು ಬರೆದು ಅವರಿಗೆ ದೇವರಾಗಿರುತ್ತೇನೆ ಎಂದು ವಾಗ್ದಾನ ಮಾಡುತ್ತಾನೆ. ಅವರಿಗೆ ಅವನ ಗುಣಸ್ವಭಾವವು ತಿಳಿದಿರುತ್ತದೆ. ಯಾಕೆಂದರೆ ಆತನು ಅವರನ್ನು ಕ್ಷಮಿಸಿರುತ್ತಾನೆ.

ಯೆಶಾಯ 40:6–8 ವಚನಗಳನ್ನು ಎಚ್ಚರಿಕೆಯಿಂದ ಓದಿರಿ. ಹುಲ್ಲಿನಂತೆ ಒಣಗಿ ಹೋಗುತ್ತಾನೆ, ಹೂವಿನಂತೆ ಬಾಡಿಹೋಗುತ್ತಾನೆ ಎಂಬ ವಚನದಿಂದ ನೀವು ಯಾವ ನಿರೀಕ್ಷೆಯನ್ನು ಹೊಂದಬಲ್ಲಿರಿ? ನಾವು ಯಾವುದರ ಮೇಲೆ ನಮ್ಮ ಭರವಸೆಯನ್ನು ಇಡುವುದರ ವಿರುದ್ಧ ನಮಗೆ ಎಚ್ಚರಿಕೆಯನ್ನು ನೀಡುತ್ತದೆ?

**ಮಂಗಳವಾರ** **ಫೆಬ್ರವರಿ 16**

## ಸುವಾರ್ತೆಯ ಜನನ (ಯೆಶಾಯ 40:9–11)

ಯೆಶಾಯ 40:9–11 ವಚನಗಳು ಯಾವ ರೀತಿಯ ಘಟನೆಯನ್ನು ವಿವರಿಸುತ್ತದೆ?

ಮುಂದಿನ ವಚನಗಳು ಶುಭಸಮಾಚಾರವನ್ನು 'ಪುರುಷನ ರೂಪವು ಯೆರೂಸಲೇಮಿಗೆ ಸಾರುವಂತೆ ತೋರುತ್ತದೆ' (ಯೆಶಾಯ 41:27; ಯೆಶಾಯ 52:7). ಆದರೆ ಯೆಶಾಯ 40:9ನೇ ವಚನವು "ಇಗೋ ನಿಮ್ಮ ದೇವರು" ಎಂದು ಪರ್ವತದಿಂದ ಸಾರಿ ಹೇಳುವ ಧ್ವನಿಯು ಸ್ತ್ರೀಯಂತೆ ತೋರುತ್ತದೆ.

ಕೀರ್ತನೆ 68ನೇ ಸಂಧಿಯಲ್ಲಿ "ದೇವರು ಒಬ್ಬಂಟಿಗನನ್ನು ಸಂಸಾರಿಯನ್ನಾಗಿ ಮಾಡುತ್ತಾನೆ; ಸೆರೆಯಲ್ಲಿರುವವರನ್ನು ಬಿಡಿಸಿ ಸುಖಾವಸ್ಥೆಗೆ ತರುತ್ತಾನೆ" ಎಂದು ಕೊಂಡಾಡುತ್ತಾನೆ (ಕೀರ್ತನೆ 68:6). ಈ ವಚನಗಳು ಐಗುಪ್ತದ ದಾಸತ್ವದಿಂದ ಆದ ಬಿಡುಗಡೆಯನ್ನು ಉಲ್ಲೇಖಿಸುತ್ತವೆ, ಯೆಶಾಯನು ಸಹಾ ಇದೇ ಆಲೋಚನೆಯಿಂದ ಇಸ್ರಾಯೇಲ್ಯರ ಎರಡನೆ ಬಿಡುಗಡೆ ಬ್ಯಾಬಿಲೋನಿನಿಂದ ಆಗುವುದನ್ನು ಉಲ್ಲೇಖಿಸುತ್ತಾನೆ.

ಏತನ್ಮಧ್ಯೆ, ಹೊಸ ಒಡಂಬಡಿಕೆಯು ಯೆಶಾಯ 40:3–5 ವಚನಗಳನ್ನು ಯೇಸುಕ್ರಿಸ್ತನ ದಾರಿಯು ಸಿದ್ಧಪಡಿಸಲು ನೇಮಕವಾದ ಸ್ನಾನಿಕನಾದ ಯೋಹಾನನಿಗೆ ಅನ್ವಯ ಮಾಡುತ್ತದೆ. ಕ್ರಿಸ್ತನು ತಾನೇ ಈ ಭೂಮಿಗೆ ನರಾವತಾರ ಎತ್ತಿಬಂದು ಜನರ ಮಧ್ಯೆವಾಸಿಸಿದನು (ಯೋಹಾನ 1:14).

ಯೋಹಾನನಿಗಿಂತ ಮುಂಚೆಯೇ ಕ್ರಿಸ್ತನು ಬರುವ ಶುಭಸಮಾಚಾರವನ್ನು ಇತರರೂ ಸಹಾ ತಿಳಿಸಿದ್ದಾರೆ. ಹಿರಿಯರಾದ ಸಿಮೆಯೋನನು ಮತ್ತು ಅನ್ನಳು ಇಂಥವರಲ್ಲಿ ಮೊದಲಿಗರು, ಇವರು ಮಗುವಾಗಿದ್ದ ಯೇಸುವನ್ನು ಪ್ರತಿಷ್ಠೆಪಡಿಸಲು ದೇವಾಲಯಕ್ಕೆ ಕರೆದುಕೊಂಡು ಬಂದಾಗ ಆತನನ್ನು ಸಂಧಿಸಿದರು (ಲೂಕ 25:38). ಯೆಶಾಯನು ಸಾರಿದಂತೆಯೇ ಅವರು ಪುರುಷ ಮತ್ತು ಸ್ತ್ರೀಯಾಗಿದ್ದರು. ಸಿಮೆಯೋನನು ಇಸ್ರಾಯೇಲ್ ಜನಾಂಗವನ್ನು ಸಂತೈಸುವವನು ಮೆಸ್ಸೀಯನಾಗಿ ಯಾವಾಗ ಬಂದನೆಂದು ಹಾರೈಸುತ್ತಿದ್ದನು (ಲೂಕ 2:25,26).

ಯೆಶಾಯನ ಪ್ರವಾದನೆಯ ಸನ್ನಿವೇಶದಲ್ಲಿ ಪ್ರವಾದಿಯಾದ ಅನ್ನಳು ಸಾರ್ವಜನಿಕವಾಗಿ ಮೊಟ್ಟಮೊದಲಿಗೆ ಯೆರೂಸಲೇಮಿನ ಆಲಯದಲ್ಲಿ ಜನರಿಗೆ ಪ್ರಕಟಪಡಿಸಿದುದು ಕೇವಲ ಕಾಕತಾಳೀಯವಲ್ಲವೆಂದು ತೋರುತ್ತದೆ. ಆಕೆ ಅದೇ ಗಳಿಗೆಯುಲ್ಲಿ ಹತ್ತಿರಕ್ಕೆ ಬಂದು ದೇವರಿಂದಾದ ಉಪಕಾರವನ್ನು

ನೆನಸಿಕೊಂಡಾಡಿದ್ದಲ್ಲದೆ ಯೆರೂಸಲೇಮಿನ ಬಿಡುಗಡೆಯನ್ನು ಹಾರೈಸುತ್ತಿದ್ದವರೆಲ್ಲರ ಸಂಗಡ ಆತನ ವಿಷಯವಾಗಿ ಮಾತಾಡುವವಳಾದಳು (ಲೂಕ 2:38). ನಮಗೆ ಗೊತ್ತಿರುವಂತೆ ಇದುವೆ ಕ್ರೈಸ್ತ ಸುವಾರ್ತೆಯ ಜನನ (ಆರಂಭ)ವಾಗಿದೆ. ಯೇಸುಕ್ರಿಸ್ತನು ರಕ್ಷಣೆಯನ್ನು ಕೊಡುವುದಕ್ಕಾಗಿ ಬಂದನು ಎಂಬ ಸುವಾರ್ತೆಯನ್ನು ಒಳ್ಳೆಯ ಸಮಾಚಾರವನ್ನು ಸಾರಿಹೇಳುವುದು. ನಂತರ, ಕ್ರಿಸ್ತನು ತಾನು ಪುನರುತ್ಥಾನವಾದ ಸುದ್ದಿಯನ್ನು ಮೊತ್ತಮೊದಲಿಗೆ ಮತ್ತೊಬ್ಬ ಸ್ತ್ರೀ ಮಗ್ದಲದ ಮರಿಯಳಿಗೆ ಕೊಟ್ಟನು (ಯೋಹಾನ 20:17,18). ಇದು ಆತನು ಭೂಮಿಗೆ ಕೊಟ್ಟ ಸುವಾರ್ತಾಸೇವೆಯು ನೆರವೇರುವುದನ್ನು ಖಾತ್ರಿಪಡಿಸುತ್ತದೆ. ನರಜಾತಿಯು ಹುಲ್ಲಿನಂತಿದೆ, ಆದರೆ ನರಾವತಾರವೆತ್ತಿ ಬಂದ ದೇವರವಾಕ್ಯವೆಂಬಾತನು ಎಂದೆಂದಿಗೂ ಇರುವಾತನು (ಯೆಶಾಯ 40:6–8)!

ಯೆಶಾಯ 40:11ನೇ ವಚನವನ್ನು ನೋಡಿರಿ. ಯಾವ ತರದ ಚಿತ್ರಣವನ್ನು ಇಲ್ಲಿ ಕೊಡಲಾಗಿದೆ? ದೇವರು ನಿಮ್ಮ ಹೇಗೆ ಪೋಷಿಸುತ್ತಿದ್ದಾನೆಂಬ ಅನುಭವವನ್ನು ದೇವರು ಕುರುಬನಾಗಿ ನಿಮ್ಮನ್ನು ಪೋಷಿಸುವುದರ ಸ್ವಂತ ಅನುಭವವನ್ನು ಅರ್ಥಪುಟದಷ್ಟು ಬರೆಯಿರಿ? ದೇವರು ನಿಮ್ಮ ನಡೆಸಿದುದನ್ನು ಆಗಾಗ್ಗೆ ನೆನಪಿಸಿಕೊಳ್ಳುವುದು ಒಳ್ಳೆಯದು ಯಾಕೆ?

**ಬುಧವಾರ** **ಫೆಬ್ರವರಿ 17**

## ಕರುಣೆಯುಳ್ಳ ಸೃಷ್ಟಿಕರ್ತ (ಯೆಶಾಯ 40:12–31)

ಯೆಶಾಯ 40ನೇ ಅಧ್ಯಾಯವು ದೇವರ ಕರುಣೆ ಮತ್ತು ಪರಾಕ್ರಮದ ಸಾರಾಂಶವನ್ನು ಹೇಗೆ ಬೆಳೆಸುತ್ತದೆ?

ಈ ಅಧ್ಯಾಯದ ಪರ್ಯಂತ ದೇವರ ಕರುಣೆ ಮತ್ತು ಪರಾಕ್ರಮ ಒಂದಕ್ಕೊಂದು ಹೆಣೆದುಕೊಂಡಿವೆ, ಮಾತ್ರವಲ್ಲದೆ ಒಟ್ಟಾಗಿ ಬೆರೆತುಕೊಂಡಿವೆ. ಯಾಕೆಂದರೆ ತನ್ನ ಜನರನ್ನು ರಕ್ಷಿಸಲು ಈ ಎರಡೂ ಸ್ವಭಾವಗಳು ದೇವರಲ್ಲಿ ಅವಶ್ಯಕವಾಗಿವೆ. ಆತನು ಕರುಣಾಶಾಲಿಯಾಗಿರುವುದರಿಂದ ಜನರನ್ನು ರಕ್ಷಿಸುತ್ತಾನೆ. ಆತನು ಪರಾಕ್ರಮಶಾಲಿಯಾಗಿರುವುದರಿಂದ ಜನರನ್ನು ರಕ್ಷಿಸಲು ಸಮರ್ಥನಾಗಿರುತ್ತಾನೆ. ಕರುಣೆ (ಯೆಶಾಯ 40:1–5): ಸಾಂತ್ವನ, ಬಿಡುಗಡೆಕೊಡಲು ಕರ್ತನಾಗಮನ

ಪರಾಕ್ರಮ (ಯೆಶಾಯ 40:3–8): ಪ್ರಭಾವ, ನಿತ್ಯತ್ವಕ್ಕೆ ಪ್ರತಿಯಾಗಿ ಮಾನವನ ಬಲಹೀನತೆ, ಕರುಣೆ (ಯೆಶಾಯ 40:9–11): ಬಿಡುಗಡೆಯ ಶುಭಸಮಾಚಾರ. ತನ್ನ ಜನರ ಪಾಲನೆ ಪರಾಕ್ರಮ (ಯೆಶಾಯ 40:12–26) ಹೋಲಿಸಲಾಗದ ಸೃಷ್ಟಿಕರ್ತ ಕರುಣೆ (ಯೆಶಾಯ 40:27–31) ಸೃಷ್ಟಿಕರ್ತನಾಗಿ ಬಳಲಿ ಹೋದವರಿಗೆ ಹೊಸಬಲವನ್ನು ಕೊಡುವುದು...

ಯೆಶಾಯನು ದೇವರ ಪರಾಕ್ರಮವನ್ನು ಆತನ ಮಹಿಮೆ ಮತ್ತು ನಿತ್ಯತ್ವ ರೂಪದಲ್ಲಿ ಪರಿಚಯಿಸುತ್ತಾ (ಯೆಶಾಯ 40:3–8) ಆತನ ಶಕ್ತಿ ಮತ್ತು ಪರಮಜ್ಞಾನವನ್ನು ಸಷ್ಟಪಡಿಸುವಾಗ ಈ ಭೂಮಿ ಮತ್ತು ಇದರಲ್ಲಿರುವ ವಸ್ತುಗಳು ಎಷ್ಟು ಅಲ್ಪವಾದವುಗಳು ಎಂಬುದು ತಿಳಿಯುತ್ತದೆ (ಯೆಶಾಯ 40:12–17).

ಯೆಶಾಯನು ಪರಿಣಾಮಕಾರಿಯಾದ ಪ್ರಶ್ನೆಗಳನ್ನು ಕೇಳುತ್ತಾ ಭೂಮಿ ಮತ್ತು ಅದರಲ್ಲಿರುವ ವಸ್ತುಗಳನ್ನು ಸ್ಪಷ್ಟವಾಗಿ ಹೋಲಿಸುತ್ತಾ ಹೋಗುವಾಗ ಯೋಬನ ಪ್ರಶ್ನೆಗಳಿಗೆ ದೇವರು ಕೊಡುವ ಉತ್ತರಗಳಂತೆ ಭಾಸವಾಗುತ್ತದೆ (ಯೋಬ 38–41 ಅಧ್ಯಾಯಗಳು).

ಹೀಗಿರಲು ದೇವರನ್ನು ಯಾರಿಗೆ ಹೋಲಿಸುತ್ತೀರಿ? ಎಂಬುದಾಗಿ ಯೆಶಾಯನು ಪರಿಣಾಮಕಾರಿಯಾಗಿ ಕೇಳುವ ಪ್ರಶ್ನೆಗೆ ಉತ್ತರವೇನು? (ಯೆಶಾಯ 40:18).

ಯೆಶಾಯನು, ಯೋಬನಂತೆಯೇ ದೇವರನ್ನು ಯಾರಿಗೂ ಹೋಲಿಸಲಾಗದು ಎಂಬುದಾಗಿ ಹೇಳುತ್ತಾನೆ. ಆದರೆ ಯೆಶಾಯನು ಈ ಪ್ರಶ್ನೆಯನ್ನು ಎತ್ತಿಕೊಂಡು ಹಿಂದಿನ ಕಾಲದ ಜನರು ತಮ್ಮ ಕೃತ್ಯಗಳಿಂದ ವ್ಯಕ್ತಪಡಿಸಿದುದನ್ನೇ ಉತ್ತರವಾಗಿ ಪರಿಗಣಿಸುತ್ತಾನೆ. ಆ ಜನರು ದೇವರನ್ನು ವಿಗ್ರಹಗಳಿಗೆ ಹೋಲಿಸಿದರು (ಯೆಶಾಯ 40:19,20).

ಈ ಆಲೋಚನೆಗೆ ಯೆಶಾಯನು ಜವಾಬು ಕೊಡುತ್ತಾನೆ. ದೇವರನ್ನು ವಿಗ್ರಹಕ್ಕೆ ಹೋಲಿಸುವುದು ಮೂರ್ಖತನವಾಗಿ ತೋರುತ್ತದೆಂದು ಈಗಾಗಲೇ ಹೇಳಿದ್ದಾನೆ, ಆದರೆ ಜನರಿಗೆ ಸರಿಯಾದುದನ್ನು ದೃಢವಾಗಿ ಅರ್ಥಮಾಡಿಸುವ ಸಲುವಾಗಿ ದೇವರ ವಿಶಿಷ್ಟತೆಯ ಬಗ್ಗೆ ವಿಶದವಾಗಿ ಹೇಳುತ್ತಾ ಹೋಗುತ್ತಾನೆ ಮತ್ತು ಉತ್ತರಿಸಲಾಗದ ವಾದವನ್ನು ಮುಂದಿಟ್ಟು ದೇವರನ್ನು ಪರಿಶುದ್ಧನಾದ

ಸೃಷ್ಟಿಕರ್ತನು ಎಂಬುದನ್ನು ಮನದಟ್ಟು ಮಾಡುತ್ತಾನೆ (ಯೆಶಾಯ 40:21–26).

ಹೇಗೆ ಯೆಶಾಯನು 40:27ನೇ ವಚನದಲ್ಲಿ ಜನರ ಮನೋಧೋರಣೆಯನ್ನು ತನ್ನ ಸಂದೇಶ ಮೂಲಕ ಮಂಡಿಸಿದ್ದಾನೆ? ನಾವು ಕೂಡ ಅದೇ ಮನೋಧೋರಣೆ ಹೊಂದಿದವರಾಗಿ ಯಾವ ರೀತಿಯಲ್ಲಿ ತಪ್ಪಿತಸ್ಥರಾಗಿದ್ದೇವೆ?

ಯೋಬನಂತೆ ಕಷ್ಟಸಂಕಟಗಳಲ್ಲಿ ಬಿದ್ದು ಪಾಡುಪಡುತ್ತಾ ದೇವರ ಸ್ವಭಾವದ ಬಗ್ಗೆ ಗೊಂದಲದಲ್ಲಿ ಬಿದ್ದು ಅಧೈರ್ಯಗೊಂಡವರಿಗೆ ಅವಶ್ಯಕವಾದ ಆದರಣೆಯನ್ನು (ಸಾಂತ್ವನ) ನೀಡುವುದೇ ದೈವಸಂದೇಶದ ಉದ್ದೇಶವಾಗಿದೆ.

ಈ ದಿನಕ್ಕೆ ನೇಮಿತವಾಗಿರುವ ಸತ್ಯವೇದದ ವಚನಗಳನ್ನು ಓದಿರಿ ಈ ವಚನಗಳು ದೇವರ ಪರಾಕ್ರಮ ಮತ್ತು ಕರುಣೆಯನ್ನು ತಿಳಿಸುವುದರೊಂದಿಗೆ ಆತನೇ ಸೃಷ್ಟಿಕರ್ತನು ಎಂಬ ಸಂಗತಿಯನ್ನು ಅರುಹುತ್ತವೆ. ಈ ಸತ್ಯವನ್ನು ತಿಳಿಯುವುದು ಬಹಳ ಮುಖ್ಯವಾಗಿದೆ ಏಕೆ? ಪ್ರತಿವಾರವು ಸಬ್ಬತ್ತು ಈ ಪ್ರಮುಖವಾದ ಅಂಶವನ್ನು ಹೇಗೆ ಗಟ್ಟಿಪಡಿಸುತ್ತದೆ?

**ಗುರುವಾರ** **ಫೆಬ್ರವರಿ 18**

## ವಿಗ್ರಹಾರಾಧನೆಯಲ್ಲಿರುವ ಸಮಸ್ಯೆ

ಮತ್ತ್ಯಾವುದೋ ಒಂದು ವಸ್ತುವು ದೇವರ ಸ್ಥಾನವನ್ನು ಕಸಿದುಕೊಂಡು ದೇವರೊಂದಿಗಿರುವ ನಿಕಟವಾದ, ವಿಶಿಷ್ಟವಾದ ಸಂಬಂಧವನ್ನು ನಾಶಪಡಿಸುವುದೇ ವಿಗ್ರಹಾರಾಧನೆ (ವಿ.ಕಾಂಡ 20:4,5, ಯೆಶಾಯ 42:8). ಆದುದರಿಂದ ವಿಗ್ರಹಾರಾಧನೆಯನ್ನು ಪ್ರವಾದಿಗಳು ಆಧ್ಯಾತ್ಮಿಕ "ವ್ಯಭಿಚಾರ"ವೆಂದು ಪರಿಗಣಿಸುತ್ತಾರೆ (ಯೆರೆಮೀಯ 3:6–9, ಯೆಹೆಜ್ಕೇಲ 16:15–19).

ಯೆಶಾಯ 41:29ನೇ ವಚನವನ್ನು ಓದಿರಿ. ಯೆಶಾಯನು ವಿಗ್ರಹಗಳನ್ನು ಏನೆಂದು ನಿರೂಪಿಸಿದ್ದಾನೆ? ಅವುಗಳ ಬಗ್ಗೆ ಏನು ಹೇಳುತ್ತಿದ್ದಾನೆಂಬುದನ್ನು ನೀವು ಹೇಗೆ ಅರ್ಥಮಾಡಿಕೊಳ್ಳುವಿರಿ? ವಿಷಯವು ಏನೇ ಇರಲಿ, ಯಾವುದೇ ವಿಗ್ರಹದ ಬಗ್ಗೆ ಇಲ್ಲಿ ಹೇಳಿರುವ ವಿಷಯವು ನಿಖರವಾದ ವಿವರಣೆಯಾಗಿದೆ ಏಕೆ?

ಪುರಾತನ ಜನರು ಪ್ರತಿರೂಪಗಳ ಇಲ್ಲವೇ ಸಂಕೇತಗಳ ಮೂಲಕ ಪರಾಕ್ರಮಶಾಲಿಯಾದ ದೇವರುಗಳನ್ನು ಪೂಜಿಸುತ್ತೇವೆಂದು ತಿಳಿದಿದ್ದರು. ಇನ್ನೊಂದು ದೇವರನ್ನು ಪ್ರತಿನಿಧಿಸುವ ಯಾವುದೇ ವಿಗ್ರಹವನ್ನು ಪೂಜಿಸುವುದರಿಂದ "ನಾನಲ್ಲದೆ ನಿನಗೆ ಬೇರೆ ದೇವರುಗಳಿರಬಾರದು" ಎಂಬ ಮೊದಲನೆ ಆಜ್ಞೆಯನ್ನು ಮೀರುವುದಾಗಿತ್ತು (ವಿ.ಕಾಂಡ 20:3). ಆದರೆ ಒಂದು ವಿಗ್ರಹವು ಬಂಗಾರದ ಬಸವನಂತೆ ನಿಜವಾದ ದೇವರನ್ನು ಪ್ರತಿನಿಧಿಸುವ ಉದ್ದೇಶವಿದ್ದರೂ ಅದು ಅವನ ಪ್ರತಿರೂಪವಾದುದರಿಂದ ದೇವರು ಅದನ್ನು ಸಹಾ ತಿರಸ್ಕರಿಸುತ್ತಾನೆ (ವಿ.ಕಾಂಡ 32:4,5) ಯಾಕೆಂದರೆ ಆತನನ್ನು ಹೇಗೆ ನಿರೂಪಿಸಬೇಕೆಂದು ಯಾರಿಗೂ ಸಹ ಗೊತ್ತಿಲ್ಲ (ಧ.ಕಾಂಡ 4:15–19) ಮತ್ತು ಆತನ ಸಾಟಿಯಿಲ್ಲದ ಮಹಿಮೆ ಮತ್ತು ಮಹತ್ವವನ್ನು ಯಾವುದರಿಂದಲೂ ಪ್ರತಿನಿಧಿಸಲು ಸಾಧ್ಯವಿಲ್ಲ. ಆದುದರಿಂದ ವಿಗ್ರಹವು ಮತ್ತೊಂದು ದೇವರಂತೆ ಪರಿಗಣಿಸಲ್ಪಡುವುದರಿಂದ ಅದನ್ನು ಪೂಜಿಸುವಾಗ ಮೊದಲನೆ ಮತ್ತು ಎರಡನೇ ಆಜ್ಞೆಗಳ ಉಲ್ಲಂಘನೆಯಾಗುತ್ತದೆ.

ದೇವದರ್ಶನಗುಡಾರದಲ್ಲಿ ಆತನ ನಿಜವಾದ ಪ್ರಸನ್ನತೆ ಅವರನ್ನು ಆವರಿಸಿಕೊಳ್ಳುವುದರಿಂದ ದೇವಜನರಿಗೆ ವಿಗ್ರಹಗಳ ಅವಶ್ಯಕತೆ ಇರುವುದಿಲ್ಲ. ಒಂದು ವಿಗ್ರಹವನ್ನು ಆರಾಧಿಸುವುದೆಂದರೆ ದೇವರ ನಿಜವಾದ ಪ್ರಸನ್ನತೆಯನ್ನು ನಿರಾಕರಿಸುವುದು ಮತ್ತು ಆ ಸ್ಥಾನವನ್ನು ಇನ್ನೊಂದಕ್ಕೆ ನೀಡುವುದಾಗಿದೆ.

ಇಂದು ಸಭೆಯಾಗಿ ನಾವು ಯಾವ ತರದ ವಿಗ್ರಹಾರಾಧನೆಯನ್ನು ಎದುರಿಸುತ್ತಿದ್ದೇವೆ? ಇತ್ತೀಚಿನ ದಿನಗಳಲ್ಲಿ ವಿಗ್ರಹಾರಾಧನೆಯು ಹೆಚ್ಚು ಸೂಕ್ಷ್ಮರೂಪದಲ್ಲಿ ಕಾಣಿಸಿಕೊಳ್ಳುತ್ತಿದಿಯೇ? ಹಾಗಾದರೆ, ಹೇಗೆ ಕಾಣಿಸಿಕೊಳ್ಳುತ್ತಿದೆ?

**"ಕ್ರೈಸ್ತರೆಂದು ಹೆಸರು ಪಡೆದುಕೊಂಡ ಅನೇಕರು ಕರ್ತನಾದ ದೇವರ ಜೊತೆಗೆ ಇತರ ದೇವರುಗಳನ್ನೂ ಸೇವಿಸುತ್ತಾರೆ. ನಮ್ಮನ್ನು ಸೃಷ್ಟಿಸಿದ ಕರ್ತನು ನಮ್ಮ ಪೂರ್ಣವಾದ ಶ್ರದ್ಧೆಯನ್ನು, ಪ್ರಥಮ ಆದ್ಯತೆಯನ್ನು ನಮ್ಮಿಂದ ನಿರೀಕ್ಷಿಸುತ್ತಾನೆ. ಆತನ ಮೇಲಿರುವ ನಮ್ಮ ಪ್ರೀತಿಯನ್ನು ಕಡಿಮೆ ಮಾಡುವ ಯಾವುದೂ ಅಥವಾ ಅವನಿಗೆ ಸಲ್ಲತಕ್ಕ ಸೇವೆಗೆ ಅಡಿಯಾಗುವಂಥದ್ದು ಒಂದು ವಿಗ್ರಹವಾಗಿ**

**ಪರಿಣಮಿಸುತ್ತದೆ**"– ಎಲೆನ್ ಜಿ ವೈಟಮ್ಮನವರ The SDA Bible commentary, ಎರಡನೇ ಸಂಪುಟದಲ್ಲಿ ಪುಟ 1011 ಮತ್ತು 102.

ವಿಗ್ರಹರಾಧನೆಯು ಬಹಳ ಆಕರ್ಷಣೀಯವಾಗಿದೆ ಎಂಬುದು ಪುರಾತನ ಬರಹಗಳಿಂದ ನಮಗೆ ಗೊತ್ತಾಗುತ್ತದೆ. ಯಾಕೆಂದರೆ ಅದು ಕಣ್ಣಿಗೆ ಕಾಣುವ ವಸ್ತುಗಳ ವಿಷಯವಾಗಿದೆ (ಭೌತಿಕವಾದುದು). ಆರಾಧನೆಯ ಬೇರೆ ಬೇರೆ ವಿಧಾನಗಳನ್ನು ಅನುಸರಿಸುವವರು. ವಿಗ್ರಹರಾಧಕರು ಪಡೆದಿರುವ ಸನ್ಮಾನ, ಅವರು ನಂಬಿರುವ ಇತರೆ ಶಕ್ತಿಗಳು ಅವರಿಗೆ ಕೊಡುವ ಫಲವತ್ತತೆ ಮತ್ತು ಸಮೃದ್ಧಿ ಮುಂತಾದವುಗಳ ವಿವರಣೆ ಕೊಡಬಲ್ಲವರಾಗಿರುತ್ತಾರೆ. ಅಂತಹ ಧರ್ಮಗಳು ಸ್ವಸಹಾಯ ಧರ್ಮಗಳಾಗಿರುತ್ತವೆ, ಬಹಳ ಪ್ರಸಿದ್ಧವಾಗಿರುವಂತೆ ಅನ್ನಿಸುತ್ತದೆಯಲ್ಲವೆ?

ಮಲಾಕಿಯ 4ನೇ ಅಧ್ಯಾಯವು ಹೇಳಿರುವ ಎಲೀಯನ ಮರುಸಂಧಾನದ ಸಂದೇಶವು ಕ್ರಿಸ್ತನು ಬರುವುದಕ್ಕೆ ಸ್ವಲ್ಪ ಮುಂಚೆ ಅವನ ದಾರಿಯನ್ನು ಸಿದ್ಧಪಡಿಸುವ ಕೆಲಸವಾಗಿದೆ, ಆವಾಗ ನಮಗಿರುವ ಆಯ್ಕೆಯು ಯೆಶಾಯನ ಕಾಲದಲ್ಲಿದ್ದ ಆಯ್ಕೆಯೇ ಆಗಿದೆ. ಅದೇನೆಂದರೆ ನಾವು ನಮ್ಮ ಸೃಷ್ಟಿಕರ್ತನನ್ನು ಆರಾಧಿಸುವುದು ಅಥವಾ ಮತ್ತೊಂದನ್ನು ಆರಾಧಿಸುವುದೇ ಆಗಿದೆ (ಪ್ರಕಟನೆ 13, 14ನೇ ಅಧ್ಯಾಯಗಳು). ಅಂತ್ಯದಲ್ಲಿ ನಾವು ಯಾವುದಾದರೊಂದನ್ನು ಯಾವಾಗಲೂ ಆರಾಧಿಸುವವರಾಗಿರುತ್ತೇವೆ.

**ಶುಕ್ರವಾರ** **ಫೆಬ್ರವರಿ 19**

**ಹೆಚ್ಚಿನ ಚಿಂತನೆಗೆ :** ಎಲೆನ್ ಜಿ ವೈಟಮ್ಮನವರ "ಪ್ರವಾದಿಗಳು ಮತ್ತು ಅರಸರು" ಎಂಬ ಪುಸ್ತಕದಲ್ಲಿ "ಇಗೋ ನಿಮ್ಮ ದೇವರು!" ಎಂಬ ಅಧ್ಯಾಯದ ಪುಟ 311 ರಿಂದ 321ರವರೆಗೆ.

"ಯೆಶಾಯನ ದಿನಮಾನದಲ್ಲಿ ಮಾನವರು ದೇವರನ್ನು ತಪ್ಪಾಗಿ ಗ್ರಹಿಸಿಕೊಂಡ ಕಾರಣ ಅವರ ಆಧ್ಯಾತ್ಮಿಕತೆಯ ಅರಿವಿಗೆ ಕತ್ತಲು ತುಂಬಿತ್ತು. ಭೂಮಿಯ ಮೇಲೆ ತುಂಬಿರುವ ಪಾಪ, ಕಷ್ಟಸಂಕಟ ಮತ್ತು ಮರಣಕ್ಕೆ ತಮ್ಮ ಸೃಷ್ಟಿಕರ್ತನಾದ ದೇವರೇ ಮೂಲಕಾರಣನೆಂದು ಜನರು ನಂಬಿಕೊಳ್ಳುವ ಹಾಗೆ ಬಹಳ

ಕಾಲದಿಂದಲೂ ಸೈತಾನನು ಪ್ರಯತ್ನಪಡುತ್ತಿದ್ದಾನೆ. ಆತನಿಂದ ಮೋಸಹೊಂದಿದ ಜನರು ದೇವರು ಕಠಿಣನು ಮತ್ತು ನಿಷ್ಠುರನು ಎಂದು ಭಾವಿಸುತ್ತಾರೆ. ಅಂತಹ ಜನರು ದೇವರು ನಮ್ಮನ್ನು ಅಲ್ಲಗಳೆದು ಖಂಡಿಸುವುದಕ್ಕಾಗಿ ನಾವು ತಪ್ಪು ಮಾಡುವುದನ್ನೇ ಕಾಯುತ್ತಿರುತ್ತಾನೆ, ಅವರಿಗೆ ಸಹಾಯ ಮಾಡದಿರಲು ಮತ್ತು ಅವರನ್ನು ಅಂಗೀಕರಿಸದಿರಲು ಧರ್ಮಶಾಸ್ತ್ರದ ನಿಯಮವನ್ನು ನೆಪಮಾಡಿಕೊಳ್ಳುತ್ತಾನೆಂದು ಬಗೆಯುತ್ತಾರೆ. ಯಾವ ಪರಲೋಕವು ಪ್ರೀತಿಯ ಆಜ್ಞಾನುಸಾರವಾಗಿ ನಡೆಯುತ್ತದೋ ಅಂತಹ ಆಜ್ಞೆಯು ಮನುಷ್ಯರ ಸಂತೋಷವನ್ನು ನಿರ್ಬಂಧಿಸುತ್ತದೆಯೆಂದೂ ಅದು ಭಾರವಾದ ನೊಗವೆಂದೂ ಅದರಿಂದ ಕಳಚಿಕೊಳ್ಳಲು ಮಾನವರು ಇಷ್ಟಪಡುತ್ತಾರೆಂತಲೂ ಮಹಾವಂಚಕನಾದ ಸೈತಾನನು ದೇವರ ಆಜ್ಞೆಯನ್ನು ತಪ್ಪಾಗಿ ಬಿಂಬಿಸುತ್ತಾನೆ. ದೇವರ ನೇಮಗಳಿಗೆ ವಿಧೇಯರಾಗಿ ನಡೆಯಲು ಸಾಧ್ಯವಿಲ್ಲಎಂತಲೂ ಅವುಗಳನ್ನು ಮೀರಿದಾಗ ಶಿಕ್ಷೆಗಳನ್ನು ಮನಬಂದಂತೆ ವಿಧಿಸುತ್ತಾನೆಂತಲೂ ಸೈತಾನನು ಸಾರಿ ಹೇಳುತ್ತಾನೆ"– ಎಲೆನ್ ಜಿ ವೈಟಮ್ಮನವರ "ಪ್ರವಾದಿಗಳು ಮತ್ತು ಅರಸರು" ಪುಸ್ತಕದಲ್ಲಿ 311ನೇ ಪುಟ.

## ಚರ್ಚಿಸಬೇಕಾದ ಪ್ರಶ್ನೆಗಳು

1. ಯೆಶಾಯ 40:12–31ರಲ್ಲಿರುವ ಸಂದೇಶವನ್ನು ನಿಮ್ಮ ಸ್ವಂತ ಮಾತುಗಳಲ್ಲಿ ಸಾರಾಂಶರೂಪದಲ್ಲಿ ಬರೆಯಿರಿ. ನಮ್ಮ ದೇವರ ಭಯಂಕರಶಕ್ತಿಯನ್ನು ಚಿತ್ರಗಳಲ್ಲಿ ಸೆರೆಹಿಡಿದು ತೋರಿಸುವ ಆಧುನಿಕ ವೈಜ್ಞಾನಿಕ ಆವಿಷ್ಕಾರಗಳ ಸಹಾಯದಿಂದ ಬರೆಯಿರಿ. ನೀವು ಬರೆದ ಸಾರಾಂಶವನ್ನು ತರಗತಿಯಲ್ಲಿ ಚರ್ಚಿಸಿರಿ.

2. ಯೆಶಾಯನು ದೇವರ ವಾಕ್ಯದ ನಿತ್ಯತ್ವಕ್ಕೆ (ಚಿರಂತನ) ಪ್ರತಿಯಾಗಿ ಮನುಷ್ಯ ಜೀವನವನ್ನು ಬಾಡಿಹೋಗುವ ಹುಲ್ಲಿಗೆ ಹೋಲಿಕೆ ಮಾಡಿ ವಿವರಿಸುತ್ತಾನೆ (ಯೆಶಾಯ 40:6–8). ಇದು ನಿಮಗಿರುವ ಸಾವಿನ ಭಯದ ಬಗ್ಗೆ ಹೇಗೆ ಮಾತಾಡುತ್ತದೆ? ಇದು ಪುನರುತ್ಥಾನದ ನಿರೀಕ್ಷೆಯನ್ನು ಹೇಗೆ ವಿವರಿಸುತ್ತದೆ? (ಯೋಬ 19:25–27, ದಾನಿಯೇಲ 12:2, 1 ಕೊರಿಂಥ 15:51–57 ಮತ್ತು 1 ಥೆಸ 4:13–18).

3. ಯೆಶಾಯ 40:12–31 ವಚನಗಳನ್ನು ಹೃದಯಕ್ಕೆ ತೆಗೆದುಕೊಂಡಾಗ ಒಬ್ಬನು ಹೇಗೆ ತನ್ನ ಗರ್ವ ಮತ್ತು ಅಹಂಕಾರಗಳಿಂದ ಗುಣಹೊಂದುತ್ತಾನೆ?

ಸಾರಾಂಶ: ಕಷ್ಟಸಂಕಟಗಳಿಂದ ಬಾಧೆಪಡುತ್ತಿದ್ದ ಜನರಿಗೆ ದೇವರು ಯೆಶಾಯನ ಮೂಲಕ ಸಂತೈಸಿದನು. ಅವರ ಸಂಕಟದ ಕಾಲವು ಅಂತ್ಯಗೊಂಡಿತು ಮತ್ತು ದೇವರು ಅವರ ಕಡೆಗೆ ಹಿಂದಿರುಗಿದನು. ಅಧೈರ್ಯಗೊಂಡು ಗೊಂದಲಕ್ಕೀಡಾಗುವ ಬದಲು ತಮ್ಮ ಸಲುವಾಗಿ ದೇವರು ಸೃಜನಶೀಲ ಶಕ್ತಿಯನ್ನು (ಸೃಷ್ಟಿಸುವ ಶಕ್ತಿ) ಉಪಯೋಗಿಸುತ್ತಾನೆಂದು ಆತನಲ್ಲಿ ಭರವಸೆಯಿಡುತ್ತಾರೆ.